**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 6, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ನಾಗೇಶ ಮಡಿವಾಳ |
| ತಂದೆಯ ಹೆಸರು | ಮಾದೇವ ಮಡಿವಾಳ |
| ವಯಸ್ಸು | 62 ವರ್ಷಗಳು |
| ಉದ್ಯೋಗ | ಪಾನಬೀಡಾ ಮತ್ತು ಚಾ ಅಂಗಡಿ, |
| ವಾಸ್ತವ್ಯ | ಗಾಂಧಿನಗರ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-02-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಆಭರಣಗಳ ಜಪ್ತು ಪಂಚನಾಮೆಯ ನೈಜ ಪ್ರತಿಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-6 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಎ)ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 05-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಒಬ್ಬ ಬಂಗಾರದ ಶೆಟ್ಟರು ಒಂದು ಪ್ಯಾಕೇಟು ಬಂಗಾರದ ಆಭರಣಗಳನ್ನು ನನ್ನ ಹಾಜರಾತಿಯಲ್ಲಿ ಹಾಜರು ಮಾಡಿರುತ್ತಾರೆ. ನಾನು ಅಲ್ಲದೇ ಠಾಣೆಯಲ್ಲಿ ಇತರೇ 2-3 ಜನ ಇದ್ದರು. ಯಾವ ಯಾವ ನಮೂನೆಯ ಎಷ್ಟು ಆಭರಣಗಳು ಇದ್ದವು ಎನ್ನುವುದನ್ನು ಹೇಳಲಾಗುವುದಿಲ್ಲ. ಆ ಸಂದರ್ಭದಲ್ಲಿ ಛಾಯಾಚಿತ್ರವನ್ನು ಹೊಡೆದಿರುತ್ತಾರೆ. ಒಂದು ದಾಖಲೆಯನ್ನು ಬರೆದುಕೊಂಡು ನನ್ನ ಸಹಿಯನ್ನು ಪಡೆದಿರುತ್ತಾರೆ. ಛಾಯಾಚಿತ್ರ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಛಾಯಾಚಿತ್ರವನ್ನು ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ಸದರಿ ದಿನದಂದು ಪೋಲಿಸರು ನಾನು ಮತ್ತು ಚಾಸಾ-7 ವಿನಾಯಕ ಸುಬ್ರಹ್ಮಣ್ಯ ಭಟ್ಟರನ್ನು ಆಭರಣಗಳ ಜಪ್ತು ಪಂಚನಾಮೆಗೆ ಬರಮಾಡಿಕೊಂಡರು ಎಂದರೆ ಸರಿ. ಆರೋಪಿಗಳು ಹೊನ್ನಾವರ ಪೋಲೀಸ್ ಠಾಣಾ ವ್ಯಾಪ್ತಿಯ ಹಲವೆಡೆ ಕಳ್ಳತನ ಮಾಡಿ ಚಾಸಾ-11 ಅನಿಲ ಅಣ್ಣಪ್ಪ ಶೇಟನ ಬಳಿ ಅಡವು ಇಟ್ಟಿರುವ ಆಭರಣಗಳನ್ನು ಸದರಿ ಚಾಸಾ-11 ಹಾಜರು ಮಾಡುವುದಾಗಿ ತಿಳಿಸಿದರು ಎಂದರೆ ಸರಿ.

ನಂತರ ಚಾಸಾ-11 ರವರು ಒಟ್ಟೂ 8 ನಮೂನೆಯ ಬಂಗಾರದ ಆಭರಣಗಳನ್ನು ನನ್ನ ಮುಂದೆ ಹಾಜರು ಮಾಡಿದರು ಎಂದರೆ ಸರಿ. ನಂತರ ಪೋಲಿಸರು ಚಾಸಾ-13 ದೀಪಕ ಚಂದ್ರಹಾಸ ಶೇಟರಿಂದ ಸದರಿ ಬಂಗಾರದ ಆಭರಣಗಳನ್ನು ಮೌಲ್ಯ ಮಾಪನ ಮಾಡಿ ತೂಕ ಮಾಡಿಸಿದರು ಎಂದರೆ ಸರಿ. ಸದರಿ ಆಭರಣಗಳನ್ನು ನಮ್ಮ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡರು ಎಂದರೆ ಸರಿ. ಆ ಸಂದರ್ಭದಲ್ಲಿ ನಿಪಿ-7 ರ ಪ್ರಕಾರ ಛಾಯಾಚಿತ್ರ ತೆಗೆಸಿದರು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ಪ್ರಕರಣದಲ್ಲಿ ಹಾಜರು ಮಾಡಿರುವ ಮಮಾ-1 ನ್ನು ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ</u>**

ಕಳೆದ 35 ವರ್ಷಗಳಿಂದ ನಾನು ಠಾಣೆಯ ಎದುರು ಚಹದ ಗೂಡಂಗಡಿ ನಡೆಸುತ್ತಿದ್ದೇನೆ. ನಾನು ಹೊನ್ನಾವರ ಪೋಲೀಸ್ ಠಾಣೆಯ ಸುಮಾರು 100 ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಪಂಚನಾಗಿ ಪಂಚನಾಮಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಒಂದು ಪ್ರಕರಣದಲ್ಲಿ ಮಾತ್ರ ಸಾಕ್ಷಿಯಾಗಿ ಬಂದಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಪೋಲೀಸ್ ಠಾಣೆಯ ಸಿಬ್ಬಂದಿಗೆ ಚಹ ಬೇಕಾದಾಗ ನಾನು ತೆಗೆದುಕೊಂಡು ಹೋಗಿ ಕೊಡುತ್ತೇನೆ ಮತ್ತು ಒಮ್ಮೊಮ್ಮೆ ಅವರು ತೆಗೆದುಕೊಂಡು ಹೋಗುತ್ತಾರೆ. ತೂಕ ಮಾಡಿದರು ಎಂದು ಹೇಳಿರುವ ಆಭರಣಗಳು ಎಷ್ಟು ಇದ್ದವು ಮತ್ತು ಅವುಗಳ ತೂಕ ಎಷ್ಟು ಇತ್ತು ಎನ್ನುವುದನ್ನು ಹೇಳಲಾಗುವುದಿಲ್ಲ ಎಂದರೆ ಸರಿ. ಚಾಸಾ-11 ಹಾಜರು ಮಾಡಿದ ಪ್ಯಾಕೇಟನ್ನು ನಾನು ಬಿಚ್ಚಿ ಅವುಗಳಲ್ಲಿ ಯಾವ ಯಾವ ಆಭರಣಗಳು ಇವೆ ಎನ್ನುವುದನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಪ್ಯಾಕೇಟನ್ನು ಚಾಸಾ-23 ರವರೂ ಸಹ ನನ್ನ ಮುಂದೆ ಬಿಚ್ಚಿ ಅವುಗಳಲ್ಲಿ ಯಾವ ಯಾವ ಆಭರಣಗಳು ಇವೆ ಎನ್ನುವುದನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ.

ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕವನ್ನು ನಾನು ಈ ದಿನ ಪೋಲಿಸರನ್ನು ಕೇಳಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಮೇಲೆ ಹೇಳಿದ ದಿನಾಂಕದಂದು ನಾನು ಠಾಣೆಗೆ ಹೋಗಿಲ್ಲ ಮತ್ತು ಶೇಟರು ಯಾವುದೇ ಆಭರಣಗಳನ್ನು ಹಾಜರು ಮಾಡಿಲ್ಲ ಮತ್ತು ಅವುಗಳನ್ನು ಪೋಲಿಸರು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ಮೇಲಿನ ಸಹಿಯನ್ನು ಪೋಲಿಸರು ನನ್ನ ಚಹ ಅಂಗಡಿ ಬಳಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**